Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)

(ವಿಶೇಷ ಸಂಚಿಕೆ)

भाग IX — अनुभाग 1

PART IX — SECTION 1

ಭಾಗ IX — ವಿಭಾಗ 1

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खन्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely— (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible] ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ - (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಏ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ್ ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಅಧಿನಿಯಮ, 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಏ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ನಾಗರಿಕ ರಕ್ಷಣಾ ಅಧಿನಿಯಮ, 1968

(1968ರ ಅಧಿನಿಯಮ ಸಂಖ್ಯೆ 27)

[24ನೇ ಮೇ 1968]

ನಾಗರಿಕ ರಕ್ಷಣೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹತ್ತೊಂಭತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**—ಈ ಅಧಿನಿಯಮವನ್ನು ನಾಗರಿಕ ರಕ್ಷಣಾ ಅಧಿನಿಯಮ, 1968 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಭಾರತ ರಕ್ಷಣಾ ಅಧಿನಿಯಮ, 1962ರ(1962ರ 51) ಮುಕ್ತಾಯದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಂದು ರಾಜ್ಯದಲ್ಲಿ ಅಥವಾ ಅದರ ಭಾಗದಲ್ಲಿ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಅಥವಾ ಅವುಗಳ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**—ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) "ನಾಗರಿಕ ರಕ್ಷಣೆ"ಯು ಭಾರತದಲ್ಲಿ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ವಾಯು, ಭೂಮಿ, ಸಮುದ್ರ ಅಥವಾ ಇತರ ಸ್ಥಳಗಳಲ್ಲಿ ಯಾವುದೇ ಶತ್ರುವಿನ ದಾಳಿಯ ವಿರುದ್ಧ ಅಥವಾ ಯಾವುದೇ ಅಂಥ ದಾಳಿಯ ಪೂರ್ಣ ಅಥವಾ ಭಾಗಶಃ ಪರಿಣಾಮವನ್ನು ತಪ್ಪಿಸುವುದಕ್ಕಾಗಿ ಯಾವನೇ ವ್ಯಕ್ತಿ, ಸ್ವತ್ತು, ಸ್ಥಳ ಅಥವಾ ವಸ್ತುವಿಗೆ ಸಂರಕ್ಷಣೆಯನ್ನು ಒದಗಿಸುವುದಕ್ಕಾಗಿ ವಾಸ್ತವವಾಗಿ ಹೋರಾಟವಾಗದ ಯಾವುದೇ ಕ್ರಮಗಳನ್ನು, ಅಂಥ ಕ್ರಮಗಳನ್ನು ಅಂಥ ದಾಳಿಗೆ ಮುಂಚೆ, ಅದರ ಅವಧಿಯಲ್ಲಿ ಆಗ ಅಥವಾ ಆ ತರುವಾಯ ತೆಗೆದುಕೊಂಡಿರಲಿ ಒಳಗೊಳ್ಳುತ್ತದೆ;

(ಖ) "ನಾಗರಿಕ ರಕ್ಷಣಾ ದಳ" ಎಂದರೆ ನಾಗರಿಕ ರಕ್ಷಣಾ ಅವಶ್ಯಕತೆಗಳನ್ನು ಪೂರೈಸಲು ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ರಚಿಸಿದ ದಳ ಮತ್ತು ಅದು 4ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ದಳವೆಂದು ಭಾವಿಸಲಾದ ಸಂಸ್ಥೆಯನ್ನು ಒಳಗೊಳ್ಳುತ್ತದೆ.

(ಗ) "ಶತ್ರು ದಾಳಿ" ಎಂದರೆ ಯಾವುದೇ ಯುದ್ಧ, ಬಾಹ್ಯ ಆಕ್ರಮಣ, ಆಂತರಿಕ ಕ್ಷೋಭೆಯ ಕಾಲದಲ್ಲಾಗಲಿ ಅಥವಾ ಅನ್ಯಥಾ ಭಾರತದಲ್ಲಿ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಯಾವುದೇ ಪ್ರಾಣ, ಸ್ವತ್ತು, ಸ್ಥಳ ಅಥವಾ ವಸ್ತುವಿನ ಭದ್ರತೆಗೆ ಅಪಾಯವನ್ನುಂಟುಮಾಡುವಂಥ, ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ಮಾಡುವ ಯಾವುದೇ ದಾಳಿ ;

(ಘ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಙ) "ವೈಯಕ್ತಿಕ ಸೇವಾಕ್ಷತಿ"ಯು ವೈಯಕ್ತಿಕ ಕ್ಷತಿ (ತುರ್ತು ಉಪಬಂಧಗಳು) ಅಧಿನಿಯಮ, 1962 (1962ರ 59)ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನ ಹೊಂದಿರುತ್ತದೆ;

(ಚ) ಸಂಘ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ ಸಂಘ ರಾಜ್ಯ ಕ್ಷೇತ್ರದ ಆಡಳಿತಗಾರ.

## ಅಧ್ಯಾಯ – II

### ನಾಗರಿಕ ರಕ್ಷಣೆಗಾಗಿ ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ

**3. ನಾಗರಿಕ ರಕ್ಷಣೆಗಾಗಿ ನಿಯಮ ರಚನಾಧಿಕಾರ.**—(1) ಕೇಂದ್ರ ಸರ್ಕಾರವು, ನಾಗರಿಕ ರಕ್ಷಣೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಿ ನಿಯಮಗಳನ್ನು ರಚಿಸಬಹುದು, ಎಂದರೆ :—

(ಕ) ನಾಗರಿಕ ರಕ್ಷಣೆಗೆ ಪ್ರತಿಕೂಲವನ್ನುಂಟುಮಾಡುವ ಸಂಭವವಿರುವ ಯಾವುದೇ ಕೆಲಸವನ್ನು ನಡೆಸುವುದನ್ನು ತಡೆಗಟ್ಟಲು ;

(ಖ) ನಾಗರಿಕ ರಕ್ಷಣೆ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಕೊಡುವುದು ಮತ್ತು ಅಂಥ ರಕ್ಷಣೆಯ ಉದ್ದೇಶಗಳಿಗಾಗಿ ;

(ಗ) ನಾಗರಿಕ ರಕ್ಷಣೆಗೆ ಅಗತ್ಯವಾದ ಸರಕುಗಳ ಮತ್ತು ವಸ್ತುಗಳ ವ್ಯವಸ್ಥೆ, ಸಂಗ್ರಹಣೆ ಮತ್ತು ನಿರ್ವಹಣೆ ;

(ಘ) ಬಂದರುಗಳಲ್ಲಿ ಮತ್ತು ರಾಜ್ಯ ಕ್ಷೇತ್ರೀಯ ಉಬ್ಬರವಿಳಿತವಿರುವ ಮತ್ತು ಒಳ ನಾಡು ಜಲಕ್ಷೇತ್ರಗಳಲ್ಲಿ ಸಚಿರವನ್ನು ನಿಷೇಧಿಸುವುದು ಅಥವಾ ನಿಯಂತ್ರಿಸುವುದು ಮತ್ತು ಅವುಗಳಲ್ಲಿ ಹಡಗುಗಳು, ತೇಲುಗುರುತುಗಳು, ದೀಪಗಳು ಮತ್ತು ಸಂಕೇತಗಳ ಉಪಯೋಗ ;

(ಙ) ದೀಪಗಳು ಮತ್ತು ಶಬ್ದಗಳ ನಿಯಂತ್ರಣ ;

(ಚ) ಬೆಂಕಿ ನಿವಾರಣೆ ಮತ್ತು ಇತರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರಾಣ ಮತ್ತು ಸ್ವತ್ತಿನ ಸಂರಕ್ಷಣೆ ;

(ಛ) ಶತ್ರುದಾಳಿಯ ಸಂದರ್ಭದಲ್ಲಿ ಯಾವುದೇ ಕಟ್ಟಡಗಳು, ಆವರಣ ಅಥವಾ ಇತರೆ ರಚನೆಗಳನ್ನು ಕೂಡಲೇ ಗುರುತಿಸುವುದರಿಂದ ಸಂರಕ್ಷಿತಗೊಳಿಸುವುದು ;

(ಜ) ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಯಾವುದೇ ಕಟ್ಟಡ, ಆವರಣ ಅಥವಾ ಇತರ ರಚನೆಗಳು ಅಥವಾ ಇತರ ಸ್ವತ್ತನ್ನು ಕೆಡವಿ ಹಾಕುವುದು, ನಾಶಪಡಿಸುವುದು ಅಥವಾ ನಿರುಪಯುಕ್ತಗೊಳಿಸುವುದು ;

(ಝ) (i) ಸ್ಫೋಟಕಗಳು, ಸುಲಭದಹ್ಯ ವಸ್ತುಗಳು, ನಾಶಕಾರಿ ಮತ್ತು ಇತರೆ ಅಪಾಯಕಾರಿ ವಸ್ತುಗಳು ಅಥವಾ ಪದಾರ್ಥಗಳು, ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳು ;

(ii) ಹಡಗುಗಳು ;

(iii) ನಿಸ್ತಂತು ಟೆಲಿಗ್ರಾಫಿಕ್ ಸಲಕರಣೆಗಳು ;

(iv) ವಿಮಾನ ; ಮತ್ತು

(v) ಛಾಯಾಚಿತ್ರಕ್ಕೆ ಸಂಬಂಧಿಸಿದ ಮತ್ತು ಸಂಕೇತ ಕೊಡುವ ಸಲಕರಣೆಗಳು ಮತ್ತು ಮಾಹಿತಿಯನ್ನು ದಾಖಲು ಮಾಡಿಕೊಳ್ಳುವ ಯಾವುದೇ ಸಾಧನ

ಇವುಗಳನ್ನು ಹೊಂದಿರುವುದು, ಉಪಯೋಗಿಸುವುದು ಅಥವಾ ವಿಲೆ ಮಾಡುವುದನ್ನು ನಿಷೇಧಿಸುವುದು ಅಥವಾ ನಿಯಂತ್ರಿಸುವುದು ;

(ಞ) ಪ್ರದೇಶಗಳನ್ನು ತೆರವು ಮಾಡಿಸುವುದು ಮತ್ತು ಅಲ್ಲಿಂದ ಸ್ವತ್ತು ಮತ್ತು ಪ್ರಾಣಿಗಳನ್ನು ಸ್ಥಳಾಂತರಿಸುವುದು ;

(ಟ) ಬೇರೊಂದು ಪ್ರದೇಶದಿಂದ ತೆರವು ಮಾಡಿಸಿದ ವ್ಯಕ್ತಿಗಳಿಗೆ ಯಾವುದೇ ಪ್ರದೇಶದಲ್ಲಿ ಸ್ಥಳಾವಕಾಶ ಮಾಡಿಕೊಡುವುದು ಮತ್ತು ಅಂತಹ ಪ್ರದೇಶದಲ್ಲಿ ಸ್ಥಳಾವಕಾಶ ಪಡೆದ, ತೆರವು ಮಾಡಿಸಿದ ವ್ಯಕ್ತಿಗಳ ವರ್ತನೆಯ ನಿಯಂತ್ರಣ ;

(ಠ) ಈ ಅಧಿನಿಯಮದ ಮೇರೆಗೆ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತಗೊಳಿಸಿದ ತೆರವು ಮಾಡಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ವಸತಿ ಕಲ್ಪಿಸುವುದು ;

(ಡ) ಹಾನಿಗೀಡಾದ ಕಟ್ಟಡಗಳು, ರಚನೆಗಳು ಮತ್ತು ಸ್ವತ್ತಿನ ರಕ್ಷಣೆ ಮತ್ತು ಮೃತ ದೇಹಗಳ ವಿಲೆ ;

(ಢ) ಗಾಯಗೊಂಡ, ಕ್ಲೇಶಮುಕ್ತ ಮಾಡಿಲ್ಲದ ಅಥವಾ ಅಪಾಯಕಾರಿ ಪ್ರಾಣಿಗಳ ಅಭಿಗ್ರಹಣ ಮತ್ತು ಅಭಿರಕ್ಷೆ ಅಥವಾ ನಾಶ ;

(ಣ) (i) ಬಂದರುಗಳು, ಹಡಗುಕಟ್ಟೆಗಳು, ದೀಪಗೃಹಗಳು, ದೀಪದ ಹಡಗುಗಳು, ವಿಮಾನ ನಿಲ್ದಾಣಗಳು ಮತ್ತು ಆಕಾಶಯಾನಕ್ಕೆ ಸಂಬಂಧಪಟ್ಟ ಸೌಲಭ್ಯಗಳು ;

(ii) ರೈಲು ಮಾರ್ಗಗಳು, ಟ್ರಾಂವೇಗಳು, ರಸ್ತೆಗಳು, ಸೇತುವೆಗಳು, ನಾಲೆಗಳು ಮತ್ತು ಭೂ ಅಥವಾ ಜಲದ ಮೇಲಿನ ಸಾರಿಗೆಯ ಎಲ್ಲ ಇತರ ಸಾಧನಗಳು;

(iii) ಟೆಲಿಗ್ರಾಫ್‌ಗಳು, ಅಂಚೆಕಚೇರಿಗಳು, ಸಂಕೇತ ಕೊಡುವ ಸಲಕರಣೆಗಳು ಮತ್ತು ಇತರ ಸಂಪರ್ಕದ ಎಲ್ಲ ಇತರ ಸಾಧನಗಳು ;

(iv) ನೀರು ಸರಬರಾಜಿನ ಮೂಲಗಳು ಮತ್ತು ವ್ಯವಸ್ಥೆಗಳು, ನೀರು, ಅನಿಲ ಅಥವಾ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಕಾಮಗಾರಿಗಳು ಮತ್ತು ಸಾರ್ವಜನಿಕ ಉದ್ದೇಶಗಳಿಗಾಗಿನ ಎಲ್ಲ ಇತರ ಕಾಮಗಾರಿಗಳು ;

(v) ಹಡಗುಗಳು, ವಿಮಾನ, ಮೋಟಾರು ವಾಹನಗಳ ಅಧಿನಿಯಮ, 1939ರಲ್ಲಿ (1939ರ4) ಪರಿಭಾಷಿಸಿದಂತೆ ಸಾರಿಗೆ ವಾಹನಗಳು ಮತ್ತು ರೈಲ್ವೆ ಮಾರ್ಗಗಳ ರೈಲುಬಂಡಿಗಳು ಮತ್ತು ಟ್ರಾಂವೇಗಳು ;

(vi) ದಾಸ್ತಾನು ಉದ್ದೇಶಗಳಿಗಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಉಗ್ರಾಣಗಳು ಮತ್ತು ಎಲ್ಲ ಇತರ ಸ್ಥಳಗಳು ;

(vii) ಸಾಮಾನ್ಯವಾಗಿ ಗಣಿಗಳು, ತೈಲ ಕ್ಷೇತ್ರಗಳು, ಕಾರ್ಖಾನೆಗಳು ಅಥವಾ ಔದ್ಯಮಿಕ ಅಥವಾ ವಾಣಿಜ್ಯ ಉದ್ಯಮಗಳು ಅಥವಾ ವಿಶೇಷವಾಗಿ ಯಾವುದೇ ಗಣಿ, ತೈಲಕ್ಷೇತ್ರ, ಕಾರ್ಖಾನೆ ಅಥವಾ ಔದ್ಯಮಿಕ ಅಥವಾ ವಾಣಿಜ್ಯ ಉದ್ಯಮ ;

(viii) ವೈಜ್ಞಾನಿಕ ಅಥವಾ ತಾಂತ್ರಿಕ ಸಂಶೋಧನೆ ಅಥವಾ ತರಬೇತಿಯನ್ನು ನಡೆಸುತ್ತಿರುವ ಅಥವಾ ನೀಡುತ್ತಿರುವ ಪ್ರಯೋಗಾಲಯಗಳು ಮತ್ತು ಸಂಸ್ಥೆಗಳು ;

(ix) ಈ ಖಂಡದಲ್ಲಿ ಈ ಮುಂಚೆ ಹೇಳಿದ ಯಾವುದೇ ವಿಷಯದ ಭಾಗವಾಗಿರುವ ಅಥವಾ ಅದಕ್ಕೆ ಸಂಬಂಧಪಟ್ಟ ಎಲ್ಲ ಕಾಮಗಾರಿಗಳು ಮತ್ತು ರಚನೆಗಳು ; ಮತ್ತು

(x) ನಾಗರಿಕ ರಕ್ಷಣೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಅರೆ ಸರ್ಕಾರ ಅಥವಾ ಸ್ವಾಯತ್ತ ಸಂಸ್ಥೆಯ ಉದ್ದೇಶಗಳಿಗಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಯಾವ ಸ್ಥಳ ಅಥವಾ ವಸ್ತುವಿನ ಸಂರಕ್ಷಣೆಯು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಲಾಗಿದೆಯೋ ಆ ಯಾವುದೇ ಇತರ ಸ್ಥಳ ಅಥವಾ ವಸ್ತು ;

(ತ) ಯಾವುದೇ ರಸ್ತೆ ಅಥವಾ ಕಾಲುದಾರಿ, ಜಲಮಾರ್ಗ, ಹಾಯ್ಗಡ ಅಥವಾ ಸೇತುವೆ, ನದಿ, ನಾಲೆ ಅಥವಾ ನೀರು ಸರಬರಾಜಿನ ಇತರ ಮೂಲದ ನಿಯಂತ್ರಣ ;

(ಥ) ಸರ್ಕಾರ ಅಥವಾ ಅದರ ಯಾವುದೇ ಇಲಾಖೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ, ಪೋಲೀಸು ದಳದ, ಅಗ್ನಿಶಾಮಕ ದಳದ ಸದಸ್ಯರು ಮತ್ತು ಇತರ ಯಾವುದೇ ಸೇವೆಯ ಸದಸ್ಯರು ಅಥವಾ ನಾಗರೀಕ ರಕ್ಷಣೆಯ ಉದ್ದೇಶಗಳನ್ನು ಹೊರತುಪಡಿಸಿ, ಇತರ ಉದ್ದೇಶಗಳಿಗಾಗಿ ಮುಖ್ಯವಾಗಿ ನಿಯೋಜಿತರಾದ ಇತರ ಯಾವುದೇ ಸೇವೆಯ ಅಥವಾ ಪ್ರಾಧಿಕಾರದ ಸದಸ್ಯರು ಅನುಕ್ರಮವಾಗಿ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಅಥವಾ ಅವರು ನಿಯೋಜಿಸಿಕೊಂಡ ಯಾವುದೇ ಸಿಬ್ಬಂದಿಗೆ ಸಂಬಂಧಪಟ್ಟಂತೆ ಕೈಕೊಳ್ಳಲು ಅಗತ್ಯಪಡಿಸತಕ್ಕಂಥ ಮುನ್ನೆಚ್ಚರಿಕೆ ಕ್ರಮಗಳು ;

(ದ) ಯಾವುದನ್ನು ಧರಿಸುವುದರಿಂದ ನಾಗರಿಕ ರಕ್ಷಣೆಗೆ ಮೋಸ ಅಥವಾ ಬಾಧಕವನ್ನುಂಟು ಮಾಡಲು ಉದ್ದೇಶಿಸಲಾಗಿದೆಯೋ ಆ ಸಮವಸ್ತ್ರಗಳು, ಅವು ಸರ್ಕಾರದ್ದೇ ಆಗಿರಲಿ ಅಥವಾ ಅನ್ಯಥಾ ಆಗಿರಲಿ ಅಥವಾ ಧ್ವಜಗಳು ಅಥವಾ ಪದಕಗಳು, ಬಿಲ್ಲೆಗಳು ಅಥವಾ ಇತರ ಅಧಿಕಾರದ ಲಾಂಛನ ಅಥವಾ ಅದಕ್ಕೆ ಸದೃಶವಾದ ಸರ್ಕಾರಿ ಪ್ರಶಸ್ತಿಗಳ ಯಾವುದೇ ಉಪಯೋಗವನ್ನು ತಡೆಗಟ್ಟುವುದು ಅಥವಾ ನಿಯಂತ್ರಿಸುವುದು ;

(ಧ) ನಿರೀಕ್ಷಿಸಿದ ಯಾವುದೇ ಶತ್ರುವಿನ ದಾಳಿಯಲ್ಲಿ ಒಳಗೊಂಡ ಅಪಾಯಗಳ ವಿರುದ್ಧ ಸಾರ್ವಜನಿಕರು ಅಥವಾ ಅವರಲ್ಲಿನ ಯಾರೇ ಸದಸ್ಯರನ್ನು ಸಂರಕ್ಷಿಸುವ ಅಥವಾ ಆ ಬಗ್ಗೆ ಅವರಿಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ. ವ್ಯಕ್ತಿಗಳು ಅಥವಾ ಪ್ರಾಧಿಕಾರಗಳು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳು ಅಥವಾ ಕೈಗೊಳ್ಳಬೇಕಾದ ಕ್ರಮ ;

(ನ) ಬೆಂಕಿಯನ್ನು ಪತ್ತೆ ಮಾಡಲಾದ ಮತ್ತು ತಡೆಗಟ್ಟುವ ಉದ್ದೇಶಗಳಿಗಾಗಿ ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂತಹ ವ್ಯವಸ್ಥೆಗಳನ್ನು ಮಾಡಲು ಅಥವಾ ಯಾವುದೇ ಕಟ್ಟಡ, ರಚನೆ ಅಥವಾ ಆವರಣದ ಒಡೆಯ ಅಥವ ಅಧಿಭೋಗದಾರರನ್ನು ಅಗತ್ಯಪಡಿಸುವುದು ;

(ಪ) ಬೆಂಕಿ ತಲೆದೋರಿರುವಾಗ ಅದರೊಂದಿಗೆ ವ್ಯವಹರಿಸುವುದಕ್ಕಾಗಿ ನಿರ್ದಿಷ್ಟಪಡಿಸಿದ ಕ್ರಮಗಳನ್ನು ಕೈಗೊಳ್ಳುವುದು ;

(ಫ) ಯಾವುದೇ ನಿರ್ದಿಷ್ಟಪಡಿಸಿದ ವಿನಾಯಿತಿಗೊಳಪಟ್ಟು ನಿರ್ದಿಷ್ಟಪಡಿಸಬಹುದಾದಂಥ ವೇಳೆಗಳ ನಡುವೆ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಇರುವ ಯಾವನೇ ವ್ಯಕ್ತಿಯು ನಿರ್ದಿಷ್ಟಪಡಿಸಿದ ಪ್ರಾಧಿಕಾರ ಅಥವಾ ವ್ಯಕ್ತಿಯು ಕೊಟ್ಟ ಬರಹದಲ್ಲಿನ ಅನುಮತಿಯ ಅಧಿಕಾರದ ಮೇರೆಗಲ್ಲದೆ ಮನೆಯಿಂದ ಹೊರಗೆ ಇರತಕ್ಕದಲ್ಲವೆಂದು ನಿರ್ದೇಶಿಸುವುದು ;

(ಬ) (i) ನಾಗರಿಕ ರಕ್ಷಣೆಗೆ ಪ್ರತಿಕೂಲವಾಗುವ ವಿಷಯಗಳನ್ನೊಳಗೊಂಡ ಯಾವುದೇ ವೃತ್ತಪತ್ರಿಕೆ, ಸಮಾಚಾರ ಪತ್ರ, ಪುಸ್ತಕ ಅಥವಾ ಇತರೆ ದಸ್ತಾವೇಜುಗಳನ್ನು ಮುದ್ರಿಸುವುದು ಮತ್ತು ಪ್ರಕಟಿಸುವುದನ್ನು ನಿಷೇಧಿಸುವುದು ;

(ii) ಮುದ್ರಣ ಅಥವಾ ಪ್ರಕಟಣೆಯ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಮುದ್ರಣಾಲಯದಿಂದ ಭದ್ರತೆಯನ್ನು ತಗಾದೆ ಮಾಡುವುದು ಮತ್ತು (1)ನೇ ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯವನ್ನೊಳಗೊಂಡ ಯಾವುದೇ ವೃತ್ತಪತ್ರಿಕೆ, ಸಮಾಚಾರ ಪತ್ರ. ಪುಸ್ತಕ ಅಥವಾ ಇತರ ದಸ್ತಾವೇಜಿನ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ;

(ಭ) ಯಾವ ಕ್ಷೇತ್ರಗಳ ನಿಯಂತ್ರಣವು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಲಾಗಿದೆಯೋ ಆ ಯಾವುದೇ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳ ವರ್ತನೆಯನ್ನು ನಿಯಂತ್ರಿಸುವುದು ಮತ್ತು ಅಂಥ ಕ್ಷೇತ್ರಗಳಿಂದ ವ್ಯಕ್ತಿಗಳನ್ನು ತೆಗೆದುಹಾಕುವುದು;

(ಮ) ನಾಗರಿಕ ರಕ್ಷಣೆಯ ಯಾವುದೇ ಯೋಜನೆಯನ್ನು ಪಾಲಿಸಲು ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವನ್ನು ಅಗತ್ಯಪಡಿಸುವುದು:

(ಯ) ನಾಗರಿಕ ರಕ್ಷಣೆಯ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಂಥ ಯಾವುದೇ ಇತರ ಉಪಬಂಧ ;

(2) (1)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವು ಅದರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಬಗ್ಗೆ ಆದೇಶಗಳನ್ನು ರಾಜ್ಯ ಸರ್ಕಾರವು ಮಾಡಬಹುದೆಂದು ಉಪಬಂಧಿಸಬಹುದು ;

(3) (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವು ಅದರ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶ ಉಲ್ಲಂಘನೆಯು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಆ ಉಲ್ಲಂಘನೆಯು ಮುಂದುವರಿಯುತ್ತಿರುವಲ್ಲಿ, ಅಂತಹ ಉಲ್ಲಂಘನೆಯು ಮುಂದುವರಿಯುವಂಥ ಅವಧಿಯ ಮೊದಲ ದಿವಸದ ತರುವಾಯದ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯವಾಗತಕ್ಕುದು ಎಂದು ಉಪಬಂಧಿಸಬಹುದು.

## ಅಧ್ಯಾಯ—I11

## ನಾಗರೀಕ ರಕ್ಷಣಾ ದಳ

4 **ನಾಗರೀಕ ರಕ್ಷಣಾ ದಳದ ರಚನೆ.**—(1) ರಾಜ್ಯ ಸರ್ಕಾರವು ರಾಜ್ಯದೊಳಗಿನ ಯಾವುದೇ ಪ್ರದೇಶಕ್ಕಾಗಿ ನಾಗರೀಕ ರಕ್ಷಣಾ ದಳಗಳು (ಇಲ್ಲಿ ಇನ್ನು ಮುಂದೆ ".ದಳ" ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ವ್ಯಕ್ತಿಗಳ ನಿಕಾಯವನ್ನು ರಚಿಸಬಹುದು ಮತ್ತು ಅಂತಹ ದಳಗಳನ್ನು ಸಮಾವೇಶಿಸಲು (ನಿಯಂತ್ರಕನೆಂದು ಕರೆಯಬಹುದಾದ) ಅವರ ಅಭಿಪ್ರಾಯದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ನ ದರ್ಜೆಗಿಂತ ಕಡಿಮೆಯಲ್ಲದ ವ್ಯಕ್ತಿಯನ್ನು ನೇಮಕ ಮಾಡಬಹುದು.

ಪರಂತು, ರಾಜ್ಯದಲ್ಲಿನ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ದಳದ ಪ್ರಕಾರ್ಯಗಳನ್ನು ವಹಿಸಿಕೊಡಬಹುದಾದಂತಹ ಸಂಸ್ಥೆಯು ಅಸ್ತಿತ್ವದಲ್ಲಿದ್ದರೆ, ರಾಜ್ಯ ಸರ್ಕಾರವು ಅಂತಹ ಪ್ರದೇಶಕ್ಕಾಗಿ ಪ್ರತ್ಯೇಕ ದಳವನ್ನು ರಚಿಸುವುದಕ್ಕೆ ಬದಲು ಆ ಪ್ರದೇಶದಲ್ಲಿ ದಳದ ಪ್ರಕಾರ್ಯಗಳನ್ನು ವಹಿಸಿಕೊಳ್ಳಲು ಅಥವಾ ನಿರ್ವಹಿಸಲು ಆ ಸಂಸ್ಥೆಯನ್ನು ಕೋರಬಹುದು ಮತ್ತು ಆ ತರುವಾಯ ಅಂಥ ಸಂಸ್ಥೆಯು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಪ್ರದೇಶಕ್ಕಾಗಿನ ದಳವೆಂದು ಭಾವಿಸತಕ್ಕದು.

(2) ರಾಜ್ಯ ಸರ್ಕಾರವು ರಾಜ್ಯದ ಒಳಗೆ ನಿಯಂತ್ರಕರ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಉದ್ದೇಶಕ್ಕಾಗಿ ನಾಗರಿಕ ರಕ್ಷಣಾ ನಿರ್ದೇಶಕರನ್ನು ನೇಮಕ ಮಾಡಬಹುದು ಮತ್ತು ಪ್ರತಿಯೊಬ್ಬ ನಿಯಂತ್ರಕನೂ ಅಂತಹ ನಿರ್ದೇಶಕನು ಕೊಡುವ ನಿರ್ದೇಶನಗಳನ್ನು ಪಾಲಿಸತಕ್ಕದು.

5. **ಸದಸ್ಯರು ಮತ್ತು ಅಧಿಕಾರಿಗಳ ನೇಮಕಾತಿ.**—(1) ರಾಜ್ಯ ಸರ್ಕಾರವು ದಳದ ಸದಸ್ಯರಾಗಲು ಯೋಗ್ಯರಾದ ಮತ್ತು ಹಾಗೆಂದು ಸೇವೆ ಸಲ್ಲಿಸಲು ಬಯಸುವ ವ್ಯಕ್ತಿಗಳನ್ನು ಹಾಗೆಂದು ನೇಮಿಸಬಹುದು ಮತ್ತು ನಿಯಂತ್ರಕನು ಹಾಗೆ ನೇಮಕಗೊಂಡ ಯಾವನೇ ಸದಸ್ಯನನ್ನು ನಿಯಂತ್ರಕನ ಅಭಿಪ್ರಾಯದಲ್ಲಿ ಅಂಥ ಸದಸ್ಯನು ಆ ದಳದಲ್ಲಿ ಧಾರಣೆ ಮಾಡಲು ಯೋಗ್ಯನಾದಂಥ ಪದಕ್ಕೆ ಅಥವಾ ಸಮಾವೇಶಕನನ್ನಾಗಿ ನೇಮಕ ಮಾಡಬಹುದು.

(2) ದಳದ ಸದಸ್ಯನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಗೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಸದಸ್ಯತ್ವದ ಪ್ರಮಾಣ ಪತ್ರವನ್ನು ಕೊಡತಕ್ಕದು.

6. **ನಾಗರಿಕ ರಕ್ಷಣಾ ದಳದ ಸದಸ್ಯರ ವಜಾ.**—(1) ನಿಯಂತ್ರಕನ ಅಭಿಪ್ರಾಯದಲ್ಲಿ ದಳದ ಯಾವನೇ ಸದಸ್ಯನು ಅಂತಹ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸಲು ವಿಫಲನಾದಲ್ಲಿ ಅಥವಾ ವಿಫಲನಾಗಿರುವಲ್ಲಿ ಅಥವಾ ಅಂತಹ ಸದಸ್ಯನಾಗಿ ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ದುರ್ವರ್ತನೆಯ ಬಗ್ಗೆ ದೋಷಿಯಾಗಿರುವುದು ಅಥವಾ ದೋಷಿಯಾಗಿದ್ದಾನೆಂದು ಕಂಡುಬಂದರೆ, ನಿಯಂತ್ರಕನು ಅವನ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅಂಥ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟು, ಅಂಥ ವಿಚಾರಣೆಯ ತರುವಾಯ ಆದೇಶದ ಮೂಲಕ ಅಂಥ ಸದಸ್ಯನನ್ನು ದಳದಿಂದ ವಜಾ ಮಾಡಬಹುದು.

(2) ದಳದ ಯಾವನೇ ಸದಸ್ಯನ ನಿರಂತರ ಹಾಜರಾತಿಯು ಅನಪೇಕ್ಷಣೀಯವೆಂದು ನಿಯಂತ್ರಕನು ಅಭಿಪ್ರಾಯಪಡುವಲ್ಲಿ, ಅವನು ಯಾವುದೇ ಕಾರಣವನ್ನು ಕೊಡದೆ ಅಂತಹ ಸದಸ್ಯನನ್ನು ದಳದಿಂದ ಕ್ಷಿಪ್ರ ವಜಾ ಮಾಡಬಹುದು.

7. **ಅಪೀಲು.**—6ನೇ ಪ್ರಕರಣದ ಮೇರೆಗೆ ದಳದಿಂದ ವಜಾ ಆಗಿರುವ ದಳದ ಸದಸ್ಯನು ಅಂತಹ ವಜಾ ಆದ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಹೂಡಬಹುದು ಮತ್ತು ಆ ಸರ್ಕಾರವು ಅಂತಹ ಅಪೀಲಿನ ಮೇಲೆ ನಿಯಂತ್ರಕ ಅಥವಾ ಇತರ ಪ್ರಾಧಿಕಾರಿಯು ಮಾಡಿದ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ವಿಪರ್ಯಯಗೊಳಿಸಬಹುದು.

8. **ನಾಗರಿಕ ರಕ್ಷಣಾ ದಳದ ಸದಸ್ಯರ ಪ್ರಕಾರ್ಯಗಳು.**—(1) ದಳದ ಸದಸ್ಯರು, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ರಚಿಸಿದ ನಿಯಮಗಳ ಮೂಲಕ ನಾಗರಿಕ ರಕ್ಷಣೆಗಾಗಿ ಕ್ರಮಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅವರಿಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದು.

(2) ರಾಜ್ಯ ಸರ್ಕಾರ ಅಥವಾ ನಿಯಂತ್ರಕನು ಆದೇಶದ ಮೂಲಕ ದಳದ ಸದಸ್ಯನನ್ನು ತರಬೇತಿಗಾಗಿ ಅಥವಾ ಅಂತಹ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ನಾಗರಿಕ ರಕ್ಷಣೆಗಾಗಿನ ಕ್ರಮಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕರೆಯಬಹುದು.

(3) ಈ ಬಗ್ಗೆ ಕೇಂದ್ರ ಸರ್ಕಾರವು ಮಾಡಬಹುದಾದಂಥ ಆದೇಶಗಳಿಗೊಳಪಟ್ಟು, ಯಾವುದೇ ರಾಜ್ಯದ ದಳದ ಯಾವನೇ ಸದಸ್ಯನನ್ನು ನಾಗರಿಕ ರಕ್ಷಣೆಗೆ ಸಂಬಂಧಪಟ್ಟ ಪ್ರಕಾರ್ಯಗಳನ್ನು ಯಾವುದೇ ಇತರ ರಾಜ್ಯದಲ್ಲಿ ನಿರ್ವಹಿಸಲು ಯಾವುದೇ ಕಾಲದಲ್ಲಿ ಅಗತ್ಯಪಡಿಸಬಹುದು ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನನ್ನು ಆ ಇತರೆ ರಾಜ್ಯದ ದಳದ ಸದಸ್ಯನೆಂದು ಭಾವಿಸತಕ್ಕದು ಮತ್ತು ಇತರೆ ರಾಜ್ಯದಲ್ಲಿನ ದಳದ ಸದಸ್ಯನ ಅಧಿಕಾರಗಳು ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಗಳು ಅವನಲ್ಲಿ ನಿಹಿತವಾಗಿರತಕ್ಕದು ಮತ್ತು ಅವನು ಆ ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದು.

9. **ವಿನಿಯಮಗಳ ರಚನಾಧಿಕಾರ.**—(1) ಕೇಂದ್ರ ಸರ್ಕಾರವು ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂತಹ ವಿನಿಯಮಗಳು—

(ಕ) ದಳದ ಸದಸ್ಯರ ಪ್ರಕಾರ್ಯಗಳನ್ನು ನಿಯಮಿಸಬಹುದು ಮತ್ತು ಸೇವೆ ಸಲ್ಲಿಸಲು ಅವರನ್ನು ಕರೆಯಬಹುದಾದಂಥ ರೀತಿಯನ್ನು ವಿನಿಯಮಿಸಬಹುದು;

(ಖ) ದಳದ ಯಾವನೇ ಅಥವಾ ಎಲ್ಲ ಸದಸ್ಯರ ಸಂಘಟನೆ, ನೇಮಕಾತಿ ಸೇವಾ ಷರತ್ತುಗಳು, ಶಿಸ್ತು, ವೇಷಭೂಷಣ ಮತ್ತು ಉಡುಪುಗಳನ್ನು ವಿನಿಯಮಿಸಬಹುದು ;

(ಗ) ದಳದ ಯಾವುದೇ ಅಥವಾ ಎಲ್ಲ ಸದಸ್ಯತ್ವದ ಪ್ರಮಾಣಪತ್ರಗಳ ನಮೂನೆಯನ್ನು ನಿಯಮಿಸಬಹುದು.

## ಅಧ್ಯಾಯ–IV

### ಸಂಕೀರ್ಣ

**10. ವೈಯಕ್ತಿಕ ಕ್ಷತಿಗಳ (ತುರ್ತು ಉಪಬಂಧಗಳು) ಅಧಿನಿಯಮದ ಉಪಬಂಧಗಳು, ದಳದ ಸದಸ್ಯರು ಅನುಭವಿಸಿದ ಕ್ಷತಿಗಳಿಗೆ ಅನ್ವಯವಾಗತಕ್ಕದ್ದು.**—ವೈಯಕ್ತಿಕ ಕ್ಷತಿಗಳ (ತುರ್ತು ಉಪಬಂಧಗಳು) ಅಧಿನಿಯಮ, 1962 (1962ರ 59) ಮತ್ತು ಅದರ ಮೇರೆಗೆ ರಚಿಸಿದ ಪ್ರತಿಯೊಂದು ಯೋಜನೆಯ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ದಳದ ಸದಸ್ಯನಾಗಿ ನೇಮಕಗೊಂಡ ಯಾವನೇ ವ್ಯಕ್ತಿಯು ಅನುಭವಿಸಿದ ವೈಯಕ್ತಿಕ ಸೇವಾ ಕ್ಷತಿಗೆ ನಾಗರಿಕ ರಕ್ಷಣಾ ಸ್ವಯಂ ಸೇವಕನು ಅನುಭವಿಸಿದ ವೈಯಕ್ತಿಕ ಸೇವಾ ಕ್ಷತಿಗೆ ಅವು ಅನ್ವಯವಾಗುವ ಹಾಗೆ—

(ಕ) ಆ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಯೋಜನೆಯ ಮೇರೆಗೆ ನಾಗರಿಕ ರಕ್ಷಣಾ ಸ್ವಯಂ ಸೇವಕನಿಗೆ ಮಾಡಿದ ಯಾವುದೇ ಉಲ್ಲೇಖವನ್ನು ದಳದ ಸದಸ್ಯನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ಖ) ಅದರಲ್ಲಿ ತುರ್ತು ಅವಧಿಗೆ ಮಾಡಿದ ಯಾವುದೇ ಉಲ್ಲೇಖವನ್ನು ದಳದ ಸದಸ್ಯನಿಗೆ ಸಂಬಂಧಪಟ್ಟಂತೆ ಈ ಅಧಿನಿಯಮ ಜಾರಿಯಲ್ಲಿರುವಂಥವು ಎಂದು ಅರ್ಥೈಸತಕ್ಕದ್ದು ಎಂಬ ಮಾರ್ಪಾಟುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದು.

**11. ದಂಡನೆಗಳು.**—(1) 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಆದೇಶದ ಮೂಲಕ ಕರೆಯಲಾದ ದಳದ ಯಾವನೇ ಸದಸ್ಯನು ಅಂತಹ ಆದೇಶವನ್ನು ಪಾಲಿಸಲು ಅಥವಾ ಅಂತಹ ಸದಸ್ಯನಾಗಿ ಅವನ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಅವನ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಅವನಿಗೆ ಕೊಟ್ಟ ಯಾವುದೇ ಕಾನೂನು ಸಮ್ಮತ ಆದೇಶವನ್ನು ಅಥವಾ ನಿರ್ದೇಶನವನ್ನು ಪಾಲಿಸಲು ಸಾಕಷ್ಟು ಕಾರಣಗಳಿಲ್ಲದೆ ಉಪೇಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂತಹ ಉಪೇಕ್ಷೆ ಅಥವಾ ನಿರಾಕರಣೆಯು ಮುಂದುವರಿಯುತ್ತಿದ್ದರೆ, ಅಂತಹ ಉಲ್ಲಂಘನೆಯು ಮುಂದುವರಿಯುತ್ತಿರುವಂಥ ಅವಧಿಯ ಮೊದಲನೇ ದಿವಸದ ತರುವಾಯದ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಯಾವನೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅವನಿಗೆ ಮಾಡಿದ ಯಾವುದೇ ಆದೇಶ ಅಥವಾ ಕೊಟ್ಟ ನಿರ್ದೇಶನವನ್ನು ಪಾಲಿಸಲು ಯಾವುದೇ ಯುಕ್ತ ಕಾರಣವಿಲ್ಲದೇ ಉಪೇಕ್ಷಿಸಿದರೆ ಅಥವಾ ತಪ್ಪಿದರೆ ಅವನು ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ಉಪೇಕ್ಷೆ ಅಥವಾ ತಪ್ಪುವಿಕೆಯು ಮುಂದುವರಿಯುತ್ತಿರುವಲ್ಲಿ ಅಂಥ, ಉಪೇಕ್ಷೆ ಅಥವಾ ತಪ್ಪುವಿಕೆಯು ಮುಂದುವರಿಯುತ್ತಿರುವಂಥ ಮೊದಲನೇ ದಿವಸದ ತರುವಾಯದ ಅವಧಿಯ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**12. ಇತರ ಅಧಿನಿಯಮಿತಿಗಳೊಂದಿಗೆ ಅಸಂಗತವಾಗಿರುವ ಅಧಿನಿಯಮಗಳು ಮತ್ತು ನಿಯಮಗಳು, ಇತ್ಯಾದಿಗಳ ಪರಿಣಾಮ.**—(1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಅಂತಹ ಯಾವುದೇ ನಿಯಮದ ಮೇರೆಗೆ ಮಾಡಿದ ಯಾವುದೇ ಆದೇಶವು ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಯಾವುದೇ ಅಧಿನಿಯಮಿತಿಯಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತ ಪತ್ರದಲ್ಲಿ ಅದಕ್ಕೆ ಅಸಂಗತವಾಗಿ ಏನೇ ಅಡಕವಾಗಿದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ನಾಗರಿಕ ರಕ್ಷಣೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಾಗರಿಕ ರಕ್ಷಣೆಗೆ ಸಂಬಂಧಪಟ್ಟಂತೆ ಮಾಡಿದ ಪ್ರತಿಯೊಂದು ನೇಮಕಾತಿ, ಆದೇಶ ಅಥವಾ ನಿಯಮವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಈ ಅಧಿನಿಯಮದ ಮೇರೆಗೆ ಅದನ್ನು ರದ್ದುಪಡಿಸುವ ಅಥವಾ ಬದಲಾಯಿಸುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**ವಿವರಣೆ.**—ಯಾವುದೇ ಉಪಬಂಧ ಅಥವಾ ಪ್ರದೇಶಕ್ಕೆ ಸಂಬಂಧಪಟ್ಟಂತೆ "ಈ ಅಧಿನಿಯಮದ ಪ್ರಾರಂಭ" ಎಂದರೆ ಸಂದರ್ಭಾನುಸಾರ ಆ ಉಪಬಂಧದ ಪ್ರಾರಂಭ ಅಥವಾ ಆ ಪ್ರದೇಶದಲ್ಲಿ ಈ ಅಧಿನಿಯಮದ ಪ್ರಾರಂಭ.

**13. ಜೀವನದ ಸಾಮಾನ್ಯ ಉಪವೃತ್ತಿಗಳೊಂದಿಗೆ ಸಾಧ್ಯವಾದಷ್ಟು ಕಡಿಮೆ ಹಸ್ತಕ್ಷೇಪ ಮಾಡುವುದು.**—ಈ ಅಧಿನಿಯಮದ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು, ಜೀವನದ ಸಾಮಾನ್ಯ ಉಪವೃತ್ತಿಗಳು ಮತ್ತು ಸ್ವತ್ತಿನ ಉಪಭೋಗದೊಂದಿಗೆ ಸಾರ್ವಜನಿಕ ಸುರಕ್ಷೆ ಮತ್ತು ನಾಗರಿಕ ರಕ್ಷಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶದೊಂದಿಗೆ ಸುಸಂಗತವಾಗಬಹುದಾದಷ್ಟು ಕಡಿಮೆ ಹಸ್ತಕ್ಷೇಪ ಮಾಡತಕ್ಕದ್ದು.

**14. ಆದೇಶಗಳ ಬಗ್ಗೆ ಉಳಿಸುವಿಕೆಗಳು:**—(1) ಈ ಅಧಿನಿಯಮದ ಮೂಲಕ ಅಥವಾ ಅಧಿನಿಯಮದ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಮಾಡಿದ ಯಾವುದೇ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಾಗಲಿ ಪ್ರಶ್ನಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೂಲಕ ಅಥವಾ ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ, ಯಾವುದೇ ಪ್ರಾಧಿಕಾರವು ಆದೇಶವನ್ನು ಮಾಡಿದೆಯೆಂದು ಮತ್ತು ರುಜು ಮಾಡಿದೆ ಎಂದು ತಾತ್ಪರ್ಯವಾಗುವಲ್ಲಿ ನ್ಯಾಯಾಲಯವು ಭಾರತ ಸಾಕ್ಷ್ಯ ಅಧಿನಿಯಮ, 1872ರ (1872ರ ಸಂಖ್ಯೆ 1) ಅರ್ಥವ್ಯಾಪ್ತಿಯೊಳಗೆ ಅಂತಹ ಆದೇಶವನ್ನು ಆ ಪ್ರಾಧಿಕಾರವು ಹಾಗೆ ಮಾಡಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**15.** ಸಶಸ್ತ್ರ ಬಲಗಳ ಸಂರಕ್ಷಣೆಗಾಗಿ **ಕೈಕೊಂಡ ಕ್ರಮಗಳಿಗೆ ಈ** ಅಧಿನಿಯಮವು ಅನ್ವಯವಾಗತಕ್ಕದ್ದಲ್ಲ.—ಈ
ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ವಿನಿಯಮ ಅಥವಾ ಆದೇಶದಲ್ಲಿ ಅಡಕವಾಗಿರುವುದು
ಯಾವುದೂ, ಕೇಂದ್ರದ ಶಸ್ತ್ರ ಬಲಗಳಿಗೆ ಅಥವಾ ನಾಗರಿಕ ರಕ್ಷಣೆ ಅಥವಾ ಆಂತರಿಕ ಬಲಗಳ ಸುರಕ್ಷತೆಯನ್ನು ಸುನಿಶ್ಚಿತಪಡಿಸುವ
ಉದ್ದೇಶಕ್ಕಾಗಿ ಅಥವಾ ಯಾವುದೇ ನೌಕಾ ಸೈನಿಕ ಅಥವಾ ವಾಯುಬಲದ ಸ್ಥಾಪನೆಗಳ ಅಥವಾ ಯಾನಗಳ **ಸಂರಕ್ಷಣೆಗಾಗಿ**
ಸಂಘದ ಸಶಸ್ತ್ರ ಬಲಗಳ ನಿಯಂತ್ರಣದಲ್ಲಿರುವ ಯಾವನೇ ಪ್ರಾಧಿಕಾರಿಯು **ಕೈಗೊಂಡ** ಯಾವುದೇ ಕ್ರಮಗಳಿಗೆ ಅನ್ವಯ
ವಾಗತಕ್ಕದ್ದಲ್ಲ.

**16.** ಪ್ರಾಸಿಕ್ಯೂಷನ್‌ಗಳಿಗೆ ನಿರ್ಬಂಧ :—ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ
ಅಪರಾಧಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ನಿಯಂತ್ರಕ ಅಥವಾ ಈ ಬಗ್ಗೆ ನಿಯಂತ್ರಕನು ಪ್ರಾಧಿಕೃತಗೊಳಿಸಿದ ಯಾವನೇ
ವ್ಯಕ್ತಿಯ ಮೂಲಕ ಅಥವಾ ಅವನ ಸಮ್ಮತಿಯೊಂದಿಗೆ ಅಲ್ಲದೆ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**17.** ಪ್ರತ್ಯಾಯೋಜಿಸಲು ಅಧಿಕಾರ.—ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ —

(ಕ) ಈ ಅಧಿನಿಯಮದ ಮೇರೆಗೆ ಅದು ಚಲಾಯಿಸಬಹುದಾದಂಥ ಎಲ್ಲ ಅಥವಾ ಯಾವುದೇ ಅಧಿಕಾರವನ್ನು,
ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳು ಯಾವುದಾದರೂ ಇದ್ದರೆ,
ಅವುಗಳ ಮೇರೆಗೆ ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಜಿಲ್ಲಾ
ಮ್ಯಾಜಿಸ್ಟ್ರೇಟನ ದರ್ಜೆಗೆ ಕಡಿಮೆ ಇಲ್ಲದಂಥ ಅಧಿಕಾರಿಯೂ ಸಹ ಚಲಾಯಿಸತಕ್ಕದೆಂದು ;

(ಖ) ಈ ಅಧಿನಿಯಮದ ಮೇರೆಗೆ ನಿಯಂತ್ರಕನು ಚಲಾಯಿಸಬಹುದಾದಂತಹ ಎಲ್ಲ ಅಥವಾ **ಯಾವುದೇ**
ಅಧಿಕಾರವನ್ನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳು
ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರದ
ಅಭಿಪ್ರಾಯದಲ್ಲಿ ಉಪ-ವಿಭಾಗದ ಮ್ಯಾಜಿಸ್ಟ್ರೇಟನ ದರ್ಜೆಗೆ ಕಡಿಮೆಯಿಲ್ಲದಂತಹ ಅಧಿಕಾರಿಯೂ ಸಹ ಚಲಾಯಿಸತಕ್ಕದೆಂದು
— ನಿರ್ದೇಶಿಸಬಹುದು.

**18.** ಸದ್ಭಾವನೆಯಿಂದ ಕೈಗೊಂಡ **ಕ್ರಮದ ಸಂರಕ್ಷಣೆ**.—(1) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ
ಯಾವುವೇ ನಿಯಮಗಳು ಅಥವಾ ಆದೇಶಗಳ ಮೇರೆಗೆ ಅಥವಾ ಅಂಥ ಯಾವುದೇ ನಿಯಮದ ಮೇರೆಗೆ ಹೊರಡಿಸಿದ
ಯಾವುವೇ ಆದೇಶಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದ ಬಗ್ಗೆ
ಸರ್ಕಾರ, ನಿರ್ದೇಶಕನ ಅಥವಾ ನಿಯಂತ್ರಕನ ಅಥವಾ ಸರ್ಕಾರದಿಂದ ಅಥವಾ ನಿಯಂತ್ರಕನಿಂದ ಅಧಿಕೃತನಾದ ಯಾವನೇ
ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಯಾವುದೇ ಅಂತಹ
ನಿಯಮದ ಮೇರೆಗೆ **ಹೊರಡಿಸಿದ** ಯಾವುದೇ **ಆದೇಶದ** ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು
ಉದ್ದೇಶಿಸಿದಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಸರ್ಕಾರ,
ನಿರ್ದೇಶಕ ಅಥವಾ ನಿಯಂತ್ರಕ ಅಥವಾ ಸರ್ಕಾರದಿಂದ ಅಥವಾ ನಿಯಂತ್ರಕನಿಂದ ಅಧಿಕೃತನಾದ ಯಾವನೇ ವ್ಯಕ್ತಿಯ ವಿರುದ್ಧ
ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು **ಹೂಡತಕ್ಕದ್ದಲ್ಲ**.

**19.** ಅಧಿಕೃತಗೊಳಿಸಿದ ವ್ಯಕ್ತಿಗಳು ಮತ್ತು ದಳದ **ಸದಸ್ಯರು** ಲೋಕ ನೌಕರರಾಗಿರತಕ್ಕದ್ದು.—ಈ
ಅಧಿನಿಯಮದ ಮೇರೆಗೆ ನಿಯಂತ್ರಕ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿ ಮತ್ತು ದಳದ
ಪ್ರತಿಯೊಬ್ಬ ಸದಸ್ಯನನ್ನು, ಹಾಗೆಂದು ಕಾರ್ಯನಿರ್ವಹಿಸುತ್ತಿರುವಾಗ ಅವನನ್ನು ಭಾರತ ದಂಡ ಸಂಹಿತೆಯ (1860ರ 45)
21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**20.** ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ **ಮುಂದೆ ಮಂಡಿಸತಕ್ಕದ್ದು**.—ಈ ಅಧಿನಿಯಮದ
ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮ ಮತ್ತು ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ
ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ
ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು
ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ
ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ
ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ
ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಅಥವಾ ವಿನಿಯಮವು ಆ ತರುವಾಯ
ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿ
ಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ
ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

V. S. RAMADEVI,

Secretary to the Govt. of India.

ಪಿ 7444